## ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ682/2007

| | ಪ್ರಾಸಾಃ- | 1 |
|---|---|---|

| | |
|---|---|
| ಹೆಸರು | ಶ್ರೀನಿವಾಸ |
| ತಂದೆಯ ಹೆಸರು | ವೆಂಕಟರಮಣಯ್ಯ |
| ವಯಸ್ಸು | 40 |
| ಉದ್ಯೋಗ | ಅಬಕಾರಿ ಮುಖ್ಯ ಪೇದೆ |
| ವಿಳಾಸ | ಕನಕಪುರ |

- - - - - - - - - - - - - - - - - - - - - - - - - - - - - - -

(ಸಾಕ್ಷಿ ವಿಚಾರಣೆ ಕಲಂ.299 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿ)

ದಿಃ23.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಎಪಿಪಿ ರವರಿಂದಃ-**

15.12.2013 ರಿಂದ ಇಲ್ಲಿಯವರೆಗೆ ಕನಕಪುರ ವಲಯದಲ್ಲಿ ಅಬಕಾರಿ ಮುಖ್ಯ ಪೇದೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ10.11.2017 ರಂದು ಈ ಪ್ರಕರಣದ ಆರೋಪಿ ಗೋಪಾಲ್ ಬಿನ್ ನಾರಾಯಣ್ ರವರಿಗೆ ಸಂಬಂಧಪಟ್ಟಂತೆ ಆತ ವಾಸವಿದ್ದ ವಿವೇಕಾನಂದ ರಸ್ತೆಯ , ಕನಕಪುರ ಟೌನ್ ನಲ್ಲಿ ವಿಚಾರಿಸಲಾಗಿ, ಆತ ಆ ಸದರಿ ಸ್ಥಳದಲ್ಲಿ ವಾಸವಿರುವುದಿಲ್ಲ ಎಂದು ತಿಳಿದು, ಆತನ ಬಗ್ಗೆ ಸದರಿ ಸ್ಥಳದಲ್ಲಿ ಟಾಟಾಂ ಬಾರಿಸಿ, ಉದ್ಘೋಷಣೆ ಯನ್ನು ಹೊರಡಿಸಿ, ಸದರಿ ಸ್ಥಳದ ನೀರಿದ ಟ್ಯಾಂಕ್ ಮೇಲೆ ಮತ್ತು ಸರ್ಕಾರಿ ಶಾಲೆಗಳ ಗೋಡೆಗಳ ಮೇಲೆ ಉದ್ಘೋಷಣೆಯ ಜೆರಾಕ್ಸ್ ಪ್ರತಿಯನ್ನು ಅಂಟಿಸಲಾಯಿತು.ಉದ್ಘೋಷಣೆ ಮಹಜರ್ ಅನ್ನು 05.00 ಗಂಟೆಗೆ ಪಂಚರ ಸಮಕ್ಷಮ ಮಾಡಲಾಯಿತು.

ಸಾಕ್ಷಿಗೆ ತೋರಿಸುತ್ತಿರುವ ಉದ್ಘೋಷಣೆ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢಿಕರೀಸುತ್ತೇನೆ.)**

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

**ಓ ಹೇ ಕೇ ಸ ಇ**